"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಯನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರು) : ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2009ನೇ ಸಾಲಿನ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

VI ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕ, 2010

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್. ಸುರೇಶ್ ಕುಮರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 2010ನೇ ಸಾಲಿನ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸ ಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 1987ರಲ್ಲಿ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ ಪಕ್ಷಾಂತರ ನಿಷೇಧ ಅಧಿನಿಯಮ ಎಂದು ಒಂದು Act ಇತ್ತು. ಅದರಲ್ಲಿ Divisionla Commissioners ಗೆ appeal hear ಮಾಡುವ Power ಇತ್ತು. ತಮಗೆ ಗೊತ್ತಿರುವ ಹಾಗೆ, ಈಗ Divisional Commissioner ಜಾಗಕ್ಕೆ Regional Commissioner ಬಂದಿದ್ದಾರೆ.

Divisional Commissioners ಬದಲು Regional Commissioners ಎಂದು nomenclature change ಮಾಡಬೇಕು. ಇದು ಮಾಡುವುದಕ್ಕಾಗದೇ ಇರುವುದರಿಂದ ಅನೇಕ ಸಂಗತಿಗಳು Pending ಇವೆ. High Court ಕೂಡ first ಇದನ್ನು amendment ಮಾಡಿ ಎಂದು direction ಕೊಟ್ಟದೆ. Instead of Divisional Commissioners, mention the name of Regional Commissioners. ಅದಕ್ಕಾಗಿ ಈ ಒಂದು very minor amendment ತಂದಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನೀವು ಈ ಪಕ್ಷಾಂತರ ನಿಷೇದ ಕಾಯಿದೆಯಡಿಯಲ್ಲಿ ಎಷ್ಟು ಕೇಸ್ ರಾಜ್ಯದಲ್ಲಿ ಇವೆ ಎನ್ನುವುದರ ಬಗ್ಗೆ ನೀವು ಸ್ವಲ್ಪ ವಿಮರ್ಶೆ ಮಾಡಬೇಕಾಗುತ್ತದೆ.

ಡಾ: ವಿ.ಎಸ್.ಆಚಾರ್ಯ : ಅದು ಕೇವಲ ಪಾರಿಭಾಷಿಕ ಶಬ್ದ ಮಾತ್ರ ಬದಲಾವಣೆ ಆಗಿದೆ.

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ನೀವು ಹೇಳುತ್ತಿರುವುದು Prospective or retrospective?

ಶ್ರೀ ಟಿ.ಬಿ. ಜಯಚಂದ್ರ : ಇಲ್ಲ ಕೇಳಿ retrospective.

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : O.K.

ಶ್ರೀ ಟಿ.ಬಿ. ಜಯಚಂದ್ರ : ಏನಾಗಿದೆ ಎಂದರೆ, ನೀವು appeal powers ಅನ್ನು Divisional Commssioners ಬದಲು Regional

Commissioners ಗೆ ಕೊಟ್ಟಿದ್ದೀರಿ. ಅದನ್ನು ನಾವು ಒಪ್ಪುತ್ತೇವೆ. ಆದರೆ, ಉದಾಹರಣೆಗೆ Deputy Commissioners, ಈಗ ಈ ವಿಚಾರದಲ್ಲಿ appeal ನ್ನು ಯಾರು hear ಮಾಡುತ್ತಿರುವುದು? Deputy Commissioners ನಿಂದ ಮುಂದಕ್ಕೆ ಹೋಗುತ್ತದೆ. ದಯಮಾಡಿ ನೀವು powersನ್ನು ಯಾರಿಗೆ ಕೊಬೇಕೆಂದರೆ, Assitant Commissionersಗೆ ಕೊಡಬೇಕು. section 4 ಮೂಲ section ನಲ್ಲಿ ಏನು ಇದೆ ಎನ್ನುವುದು ಗೊತ್ತಿಲ್ಲ. Anti defection law ಏನಾದರೂ anti defection ಆಯಿತು ಎಂದರೆ 2 ವರ್ಷಗಳಾದೂ ಇದು ಇತ್ಯರ್ಥವಾಗುವುದಿಲ್ಲ. at least ಏನಾದರೂ ಮಾಡಿ ಇದು 15 days ನಲ್ಲಿ ಆಗಬೇಕು. ಈಗ cross voting ಮಾಡಿರುತ್ತಾನೆ. ಈ ಬಗ್ಗೆ records ಇರುತ್ತದೆ. ಅದಕ್ಯಾಕೆ Prove ಮಾಡಬೇಕು? ದಯಮಾಡಿ ನೀವು ಯಾವುದೇ ರೀತಿಯಲ್ಲಾದರೂ ಇದಕ್ಕೊಂದು ಶಿಸ್ತು ಬರಬೇಕು. cross voting ಆಗುವುದನ್ನು avoid ಮಾಡಬೇಕಾದರೆ ನೀವು ಇದನ್ನೆಲ್ಲಾ ತರಬೇಕಾಗುತ್ತದೆ. cross voting ಆಗಿದ್ದು record ಆಗಿರುತ್ತದೆ ಅಲ್ಲವೆ? Immediate 15 days ನಲ್ಲಿ ಮಾಡುವ ರೀತಿಯಲ್ಲಿ ಬಂದರೆ ಅದಕ್ಕೆ ಒಂದು ಶಿಸ್ತು ಬಂದ ಹಾಗೆ ಆಗುತ್ತದೆ. ಇಲ್ಲಾಂದ್ರೆ ಶಿಸ್ತು ಇಲ್ಲ, ಎಂತದೂ ಇಲ್ಲ. ಬರಿ ಬೆಳಗ್ಗೆ ಎದ್ದು Court ಗೆ ಅಲೆಯುವುದಾಗುತ್ತದೆ.

ಶ್ರೀ ಡಿ.ಕೆ.ಶಿವಕುಮಾರ್ : ಈ defection ವಿಚಾರ ಏನು ಇದೆ ಇದಕ್ಕೆ ನೀವು ಒಂದು time bond programme ಈ Regional Commissioners ಗಳಿಗೆ ಇಂಥ ಕೇಸ್‌ನ್ನು ಇಷ್ಟು ದಿವಸಗಳಿಗೆ ತೀರ್ಮಾನಿಸಬೇಕು ಎನ್ನುವ proposal ತೆಗೆದುಕೊಂಡು ಬನ್ನಿ. ತಾವು ಇದರ ಬಗ್ಗೆ ಹೇಳುವಾಗ ಒಂದು ವಿಚಾರ ನಮಗೆ clarify ಮಾಡಬೇಕು. ಎಷ್ಟು ಜನ cmc ಯಲ್ಲಿ cross vote ಮಾಡುವುದಕ್ಕೆ ಅವಕಾಶವಿದೆ? ಅವನ membership ಉಳಿಸಿಕೊಳ್ಳಬೇಕಾದರೆ, if you can enlighten me, corporations, CMCS ನಲ್ಲಿ 50% 33% ಈ ಬಗ್ಗೆ ಹೇಳಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ಈ ಬಗ್ಗೆ ಬೇಕಾದರೆ ಇನ್ನೊಂದು ಸಲ ಹೇಳುತ್ತೇನೆ. ದಯವಿಟ್ಟು ಇದು ಸಣ್ಣ ತಿದ್ದುಪಡಿಯಾಗಿರುವುದರಿಂದ ಇದನ್ನು ಪಾಸ್ ಮಾಡಿಕೊಡಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ನೀವು ಒಂದು amendment ತಂದಿದ್ದೀರಿ. Amendment ತರದೆ ಹೋಗಿದ್ದರೆ ಇವರ ಹೇಳುವ ವಿಚಾರಗಳೆಲ್ಲಾ ಪ್ರಸ್ತಾಪಿಸುವ ಅಗತ್ಯವಿರಲಿಲ್ಲ. ಉದಾಹರಣೆಗೆ ಹೇಳುತ್ತೇನೆ. ಹೂಣಸೂರು ವಿಚಾರದಲ್ಲಿ ಸುಮಾರು ಎರಡೂವರೆಗಳ ವರ್ಷಗಳಿಂದ pending ಇದೆ. ಇವರಗೆ ಏಕೆ ಅಧಿಕಾರ ಕೊಡಬೇಕು? ಅಧಿಕಾರ ಏಕೆ ಕೊಡುತ್ತೀರಿ? ಅದಕ್ಕೆ ಏನಾದರೊಂದು Summary proceedings ಮಾಡಿ disposal ಮಾಡುವುದಕ್ಕೆ ಆರು ತಿಂಗಳೊ ವರ್ಷವೋ ಮೂರು ತಿಂಗಳೊ ಮಾಡಿ. ಆರು ತಿಂಗಳಲ್ಲಿ ಮಾಡಿ.

ಶ್ರೀ ಡಿ.ಕೆ. ಶಿವಕುಮಾರ್ : ನಮ್ಮ Assembly Speaker ಮಾಡಿದಿರಲ್ಲಾ... ತೆಗೆದುಕೊಳ್ಳಲಿಲ್ಲ.

ಶ್ರೀ ಸಿದ್ದರಾಮಯ್ಯ : ಮೂರು ತಿಂಗಳು ಆರು ತಿಂಗಳು ಮಾಡುವುದರಿಂದ purpose is going to be served. Otherwise no purpose is going to be served. ಮಾಡಿರುವ ಉಪಯೋಗ ಏನು?

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಜಯಚಂದ್ರರವರು ಹೇಳಿದಂತೆ ಮೊದಲು ಶಿಸ್ತನ್ನು ತರೋಣ. ವ್ಯವಸ್ಥೆಯಲ್ಲಿ ಶಿಸ್ತನ್ನು ತರುವುದು ಬಹಳ ಅಗತ್ಯವಿದೆ. ಯಾರಿಗೂ ಕೂಡ ಅಂಕೆಯಿಲ್ಲ, ಭಯವಿಲ್ಲ, ಏನೂ ಕೂಡ ಆಗಿಲ್ಲ. ನಾವು ಕೂಡ nomenclature change ಮಾಡುವುದ ರಿಂದಾಗಲ್ಲ. ಅದಕ್ಕಾಗಿ ಒಂದು time limit ಇಟ್ಟು ಅದು Deputy Commissioners ಇರಬಹುದು, Regional Comissioners ಇರಬಹುದು, ಹುಣಸೂರು ಪ್ರಸಂಗ ಎಲ್ಲೂ ಕೂಡ ಮರುಕಳಿಸದಂತೆ ಆ time limit ನೊಳಗೆ ಮಾಡುವುದಕ್ಕೆ ನಾವು action ತೆಗೆದುಕೊಳ್ಳುತ್ತೇವೆ.

ಶ್ರೀ ಸಿದ್ದರಾಮಯ್ಯ : Action ಅಲ್ಲ ಇದನ್ನು amendment ಮಾಡಬೇಕು. ಈಗ ಬೇಡವೆಂದರೂ ಮುಂದಿನ ಎರಡು ತಿಂಗಳಿನಲ್ಲಿ ತನ್ನಿ.

ಶ್ರೀ ಡಿ.ಕೆ. ಶಿವಕುಮಾರ್ : ಭಯ ಇರಲಿ ಸ್ವಾಮಿ ಅದಕ್ಕೆ ನೀವು amendment ಮಾಡಿ. ನಮ್ಮ ಪಾರ್ಟಿನಲ್ಲಿ ಗೆದ್ದು ಬಿಟ್ಟು ಅವರು ಆ ರೀತಿ ಮಾಡಿದರೆ ಯಾರನ್ನಾದರೂ ಹಿಡಿಯುವುದಕ್ಕೆ ಆಗುತ್ತದೆಯೆ? ಯಾರನ್ನೂ ಹಿಡಿಯುವುದಕ್ಕಾಗುತ್ತಿಲ್ಲ. Can you please bring an amendment on this?

ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ (ಪಕ್ಷಾಂತರ ನಿಷೇದ) (ತಿದ್ದುಪಡಿ) ವಿಧೇಯಕ 2010

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 2010 ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ (ಪಕ್ಷಾಂತರ ನಿಷೇದ) (ತಿದ್ದುಪಡಿ) ವಿಧೇಯಕ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : "2010ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ (ಪಕ್ಷಾಂತರ ನಿಷೇದ) (ತಿದ್ದುಪಡಿ) ವಿಧೇಯಕ ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು : "ಖಂಡ 2 ಸೇರಿದಂತೆ ಈ ವೀಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 2 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಮಾನ್ಯ ಅಧ್ಯಕ್ಷರೆ, 2010ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ (ಪಕ್ಷಾಂತರ ನಿಷೇದ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2010 ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ (ಪಕ್ಷಾಂತರ ನಿಷೇದ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

VII ಕರ್ನಾಟಕ ಸಂಸ್ಕೃತಿ–ವೇದ ವಿಶ್ವವಿದ್ಯಾಲಯ ವಿಧೇಯಕ 2009 ಪರ್ಯಾಲೋಚನೆ ಪ್ರಸ್ತಾವ

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, 2009 ರ ಕರ್ನಾಟಕ ಸಂಸ್ಕೃತಿ–ವೇದ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಇದು ಎರಡು ಬಾರಿ ಸುದೀರ್ಘವಾಗಿ ಚರ್ಚೆಯಾಗಿದೆ. ಬೆಳಗಾಂನಲ್ಲಿ ಆಯಿತು. ಕಳೆದ ಸಲ ನೀವೇ ಮುಂದಕ್ಕೆ ಹಾಕಿ ಎಂದು ಹೇಳಿದಿರಿ. ಆದರೂ ಇನ್ನೊಮ್ಮೆ explain ಮಾಡುತ್ತೇನೆ. ತಾವು ಇದನ್ನು ಮುಂದೆ ಹಾಕುವುದಕ್ಕೆ ವಿನಂತಿ ಮಾಡಿದಿರಿ ಅದಕ್ಕೆ ನಾನು ಒಪ್ಪಿಕೊಂಡು ಇದನ್ನು ಮುಂದಕ್ಕೆ ಹಾಕಿದ್ದೆವು. ನಮ್ಮ ರಾಜ್ಯದಲ್ಲಿ ಸುಮಾರು 16 ಸಂಸ್ಕೃತ ಕಾಲೇಜುಗಳಿವೆ. 250 ಪಾಠಶಾಲೆಗಳಿವೆ. ಸಂಸ್ಕೃತ ವಿಷಯದಲ್ಲಿ, ತಮಗೆ ಗೊತ್ತಿರುವ ಹಾಗೆ ಬಿ.ಎಂ.ಶ್ರೀಕಂಠಯ್ಯನವರು, ಕನ್ನಡ ಭಾಷೆ ಪ್ರಬಲವಾಗುವುದಕ್ಕೆ ಸಂಸ್ಕೃತ ಕೂಡ ಬಹಳ ಪೂರಕ ಆಗಿದೆ ಎಂದು ಹೇಳಿದ್ದಾರೆ. ಆ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ನಮ್ಮ ಸಂಸ್ಕೃತ ಭಾಷೆ, ಸಾಹಿತ್ಯ, ಶಾಸ್ತ್ರ ಅಧ್ಯಯನ, ಅದಕ್ಕೆ ಕರ್ನಾಟಕ ತವರು ಮನೆ. ಈ ಹಿನ್ನೆಲೆಯಲ್ಲಿ ಈ ಒಂದು ವಿಶ್ವವಿದ್ಯಾನಿಲಯದ ಅವಶ್ಯಕತೆಯಿದೆ ಎನ್ನುವ ಭಾವನೆಯಿಂದ ಮತ್ತು ಪ್ರಾಚೀನ ಜ್ಞಾನ ಏನು ಇದೆ ಅದು ಆಧುನೀಕರಣಕ್ಕೆ transfer ಆಗಿ ಬರಬೇಕು. ಬರಬೇಕು ಎನ್ನುವುದಾದರೆ ಸಂಸ್ಕೃತದ ಬಗ್ಗೆ research ಗಳು ನಡೆಯಬೇಕು. ಅಲ್ಲಿ ಏನು ಹಿಂದೆ ಅಧ್ಯಯನ ಮಾಡಿದ್ದಾರೊ ಅದನ್ನು ತಿಳಿದುಕೊಳ್ಳುವಂತ ಕೆಲಸ ಆಗಬೇಕಾಗಿದೆ. ಆ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ